## ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ಹಾವೇರಿ ಜಿಲ್ಲೆ, ಸವಣೂರು ಪಟ್ಟಣದ ಸ್ಥಳೀಯ ಯೋಜನಾ ಪ್ರದೇಶಕ್ಕೆ ತಯಾರಿಸಲಾಗಿರುವ ಸಮಗ್ರಾಭಿವೃದ್ಧಿ ಯೋಜನೆಗೆ ಅಂತಿಮ ಅನುಮೋದನೆ ನೀಡುವ ಕುರಿತು.

ಓದಲಾಗಿದೆ:
1) ಸರ್ಕಾರದ ಆದೇಶ ಸಂ.ನಅಇ 77 ಟಿಟಿಪಿ 98 ದಿ:22-4-98.
2) ಮುಖ್ಯಾಧಿಕಾರಿಗಳು, ಯೋಜನಾ ಪ್ರಾಧಿಕಾರ, ಪುರಸಭೆ ಸವಣೂರು ಇವರ ಪತ್ರ ಸಂ.ಸಯೋಪ್ರಾ:ಪು:ಸಮಗ್ರಯೋ:736:99-2000 ದಿನಾಂಕ 24-3-2000.
3) ನಯೋ:ಉನಿಕೇ:ಸಮಗ್ರಅಯೋ:1:ಸವಣೂರು:99-2000 ದಿನಾಂಕ 10-4-2000.

---

**ಪ್ರಸ್ತಾವನೆ:**

ಮೇಲೆ (1) ರಲ್ಲಿ ಓದಲಾದ ಆದೇಶದಲ್ಲಿ ಸವಣೂರು ಪಟ್ಟಣದ ಸಮಗ್ರಾಭಿವೃದ್ಧಿ ಯೋಜನೆಗೆ ತಾತ್ಕಾಲಿಕ ಅನುಮೋದನೆ ನೀಡಿರುತ್ತದೆ. ಮೇಲೆ (2)ರಲ್ಲಿ ಓದಲಾದ ಪತ್ರದಲ್ಲಿ ಮುಖ್ಯಾಧಿಕಾರಿಗಳು, ಯೋಜನಾ ಪ್ರಾಧಿಕಾರ, ಪುರಸಭೆ ಸವಣೂರು ಇವರು ಸವಣೂರು ಪಟ್ಟಣದ ಸ್ಥಳೀಯ ಯೋಜನಾ ಪ್ರದೇಶಕ್ಕೆ ಸಮಗ್ರಾಭಿವೃದ್ಧಿ ಯೋಜನೆಯನ್ನು ತಯಾರಿಸಿ ಸರ್ಕಾರದ ಅನುಮೋದನೆಯನ್ನು ಕೋರಿರುತ್ತಾರೆ. ಮೇಲೆ (3) ರಲ್ಲಿ ಓದಲಾದ ಪತ್ರದಲ್ಲಿ ಸವಣೂರು ಪಟ್ಟಣದ ಸಮಗ್ರಾಭಿವೃದ್ಧಿ ಯೋಜನೆಯನ್ನು 2011ನೇ ಇಸವಿಗೆ ಅಂದಾಜಿಸಲಾಗಿ 50,000 ಜನಸಂಖ್ಯೆಗೆ ತಯಾರಿಸಿದ್ದು ಯೋಜನೆಯ ಅಭಿವೃದ್ಧಿಗಾಗಿ ಒಟ್ಟು 500 ಹೆಕ್ಟೇರ್ ಭೂಮಿ ಬೇಕಾಗಬಹುದೆಂದು ಅಂದಾಜು ಮಾಡಿದ್ದು ಈ ಪೈಕಿ 286.88 ಹೆಕ್ಟೇರ್ ಪ್ರದೇಶವನ್ನು ವಸತಿಗಾಗಿ (ಶೇಕಡ 57.33), 28.00 ಹೆಕ್ಟೇರ್ ವಾಣಿಜ್ಯಕ್ಕಾಗಿ (ಶೇಕಡ 5.74), ಹಾಗೂ 17.42 ಹೆಕ್ಟೇರ್ ಪ್ರದೇಶ ಕೈಗಾರಿಕೆಗಾಗಿ (ಶೇಕಡ 3.48) ಕಾಯ್ದಿರಿಸಲಾಗಿದೆ. ಹಾಗೂ ಇನ್ನಿತರ ನಾಗರೀಕ ಸೌಲಭ್ಯಗಳಿಗೆ ಬಯಲು ಜಾಗ:ಉದ್ಯಾನವನಗಳಿಗೆ ಅಗತ್ಯ ಪ್ರದೇಶಗಳನ್ನು ನಿಗದಿಗೊಳಿಸಲಾಗಿದೆ ಎಂತಲೂ ಯೋಜನೆಯನ್ನು ಕಾರ್ಯರೂಪಕ್ಕೆ ತರಲು ಆಗತ್ಯವಾದ ವಲಯ ನಿಯಮಾವಳಿಗಳನ್ನು ರೂಪಿಸಲಾಗಿದೆ ಎಂತಲೂ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 12 ರಲ್ಲಿ ನಿರೂಪಿಸಿರುವ ಅಂಶಗಳಿಗೆ ಅನುಗುಣವಾಗಿ ಯೋಜನೆ ತಯಾರಿಸಿದ್ದು ಕೆ.ಟಿ.ಸಿ.ಪಿ. ಕಾಯ್ದೆ 1961 ರ ಕಲಂ 13(3) ರನ್ವಯ ಸವಣೂರು ನಗರದ ಸಮಗ್ರಾಭಿವೃದ್ಧಿ ಯೋಜನೆಗೆ ಅಂತಿಮ ಅನುಮೋದನೆ ಕೋರಿ ನಗರ ಯೋಜನಾ ನಿರ್ದೇಶಕರು ಪ್ರಸ್ತಾವನೆ ಸಲ್ಲಿಸಿರುತ್ತಾರೆ.

ವಿಷಯವನ್ನು ಕೂಲಂಕಷವಾಗಿ ಪರಿಶೀಲಿಸಲಾಗಿದ್ದು ಈ ಕೆಳಕಂಡಂತೆ ಆದೇಶವನ್ನು ಹೊರಡಿಸಿದೆ.

**ಸರ್ಕಾರಿ ಆದೇಶದ ಸಂ.ನಅಇ 100 ಟಿಟಿಪಿ 2000 ಬೆಂಗಳೂರು ದಿ: 29-6-2000**

ಹಾವೇರಿ ಜಿಲ್ಲೆ, ಸವಣೂರು ಪಟ್ಟಣದ ಸಮಗ್ರಾಭಿವೃದ್ಧಿ ಯೋಜನೆಗೆ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನೆ ಕಾಯ್ದೆ 1961 ರ ಕಲಂ 13(3) ರನ್ವಯ ಸರ್ಕಾರವು ಅಂತಿಮ ಅನುಮೋದನೆ ನೀಡಿದೆ.

ಸಮಗ್ರಾಭಿವೃದ್ಧಿ ಯೋಜನೆಗೆ ಅನುಮೋದನೆ ನೀಡಿದ ಗುರುತಾಗಿ ವರದಿ ಹಾಗೂ ನಕಾಶೆಗಳ ಮೇಲೆ ಸರ್ಕಾರದ ಮುದ್ರೆಯನ್ನು ಹಾಕಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,

AMokhtadar

(ಅಹ್ಮದ್ ಎ.ಮುಖ್ತದರ್),
ಸರ್ಕಾರದ ಅಧೀನ ಕಾರ್ಯದರ್ಶಿ,
ನಗರಾಭಿವೃದ್ಧಿ ಇಲಾಖೆ.